MS – 034

# ಎರಡನೆಯ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಮೇ 2016
## (ಫ್ರೆಶರ್ಸ್ + ರಿಪೀಟರ್ಸ್) (ಸಿ.ಬಿ.ಸಿ.ಎಸ್.) (2014-15 ಮತ್ತು ನಂತರದವರಿಗೆ)
## ಕನ್ನಡ ಭಾಷಾ ಪತ್ರಿಕೆ – II
## ಸುವರ್ಣ ಸಂಪದ

Time : 3 Hours  Max. Marks : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (1×6=6)

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (2×2=4)

1) ದಲಿತ ಸಾಹಿತ್ಯ
2) ಸರ್ವದಮನ
3) ದೂರ್ವಾಸ
4) ಡಾ|| ಎಚ್.ಎಲ್. ಪುಷ್ಪ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) 'ಸಾವಿರಾರು ನದಿಗಳು' – ಕವಿತೆಯ ಸಂದೇಶವೇನು ? ವಿವರಿಸಿ.
2) ಶಕುಂತಲೆಯ ಬದುಕಿನ ದುರಂತ ಕಾವ್ಯದಲ್ಲಿ ಹೇಗೆ ಮೂಡಿ ಬಂದಿದೆ ? ವಿಷದಪಡಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಜಲಗಾರ ಸೂರ್ಯೋದಯವನ್ನು ಬಣ್ಣಿಸುವ ಬಗೆ.
2) ರೈತ ಮತ್ತು ಜಲಗಾರನ ನಡುವಿನ ಸಂಭಾಷಣೆ.
3) ಯುವಕರು ಕುರುಡನನ್ನು ಪರೀಕ್ಷಿಸಿದ ಬಗೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) 'ಜಲಗಾರ' – ನಾಟಕವು "ಅಸಮಾನತೆಯ ಪ್ರತೀಕ" – ಚರ್ಚಿಸಿ.
2) 'ದುಡಿಮೆಯೆ ದೇವರು' – ಈ ನುಡಿಗಟ್ಟು ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

P.T.O.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಹಸಿರು ಹೊನ್ನಿಗೆ ಕನ್ನ.

2) ಲೋಹಿಯ ಅವರ ದೃಷ್ಟಿಯಲ್ಲಿ ಹೆಣ್ಣಿನ ಚೆಲುವು.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಟಾಲ್‌ಸ್ಟಾಯ್‌ನ ಶಾಲಾಜೀವನವನ್ನು ಪರಿಚಯಿಸಿ.

2) ಕಾರೆಕುಚಿ ಹಳ್ಳಿಯ ಕಥೆಯನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಆನ್‌ಲೈನ್ ಮಾರುಕಟ್ಟೆಯಲ್ಲಿ ರೈತರಿಗೆ ಹಣ ಪಾವತಿಯಾಗುವ ಬಗೆ.

2) 'ನಿಮ್ಮ ಮೊಬೈಲ್ ನಿಮ್ಮ ಬ್ಯಾಂಕ್'.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಆನ್‌ಲೈನ್ ಕೃಷಿ ವಹಿವಾಟಿನ ವೈಖರಿಯನ್ನು ವಿವರಿಸಿ.

2) 'ಮೌಸ್ ಬಿಟ್ಟು ಮೊಲ ಹಿಡಿದಾತ' – ಲೇಖನದ ಸ್ವಾರಸ್ಯವನ್ನು ಪರಿಚಯಿಸಿ.

---